Estimates have been prepared after discussing with the Planning Commission and on the basis of the suggestions given by them and the amount of aid that may be given for the various plans,

On this basis the amount of expenditure included in the budget estimates for the year 1979-80 are as follows :

		Rs. in Crores
1.	Non-Plan ...	2.44
2.	State Plan ...	27.44
3.	Central Plan ...	24.88
4.	Central Revised Plan ...	34.53
		89 29

The details of Revenue Receipts are contained in the Budget Estimates of 1979-80 vide Page 142 to 167.

Closure of Publication of Samyukta Karnataka

SRI A. LAKSHMISAGAR.—Sir, yesterday I brought to your kind notice about the situation that has arisen out of the closure of Samyukta Karnataka—Bangalore Edition and that the employees are on hunger strike. You were good enough to tell me to make a formal motion. I have given notice of motion in writing this morning at 11-00 A. M. My request to you is that this may be taken up tommorrow. The matter is very urgent,

MR. SPEAKER.—I will pass it on to the Government and get the information as early as possible.

SRI A. LAKSHMISAGAR.—Sir, the matter may taken up before 6 'O' Clock tommorrow.

MR. SPEAKER.—I will look into it.

Providing amenities in the Legislator's Home.

ಶ್ರೀ ವಿ. ಜಿ. ಕೊಡಗಿ.—ಅಧ್ಯಕ್ಷರೇ, ನಾನು ೬-೭ ಗಮನ ಸೆಳೆಯುವ ಸೂಚನೆಗಳನ್ನು ಕಳುಹಿಸಿದ್ದೇನೆ; ಆದರೆ ಇದುವರೆಗೆ ಒಂದೂ ಬಂದಿಲ್ಲ.

MR. SPEAKER.—Hon. Members cannot get up and speak without proper notice. The Hon. Member may please sit down.

SRI S. R. BOMMAI.—Sir, I do not mean to say that without notice or permission we should speak. But if a member has already given

notice and if he has not received any answer or if his subject is not put on the Agenda, the Chair should permit him to make his statement.

MR. SPEAKER.—It is not a good convention. When a notice is given, it will be sent to the Government and according to priority it will be posted on the Agenda.

SRI S. R. BOMMAI.—Much depends upon the urgency of the matter. The Hon'ble Speaker should have the patience to hear the Member. It may not be correct to ask him to sit down.

MR. SPEAKER.—I am sorry; the Hon. Member cannot remarks like that. When 2 or 3 Members stand at the same time and begin to speak, I have to ask them to sit down.

SRI S. R. BOMMAI.—I can understand when 2 or 3 members speak that you can ask them to sit down. But, when aMember seeks permission to speak, the Chair should hear him. My only request is that you should give a patient hearing to the Hon. Member.

SRI B. SUBBAYYA SHETTY —We entirely agree that if two or m re members get up and speak, the Speaker has every right to say that only one member should speak. But to tell him that he cannot Speak at all and that he hear him, is not good.

MR. SPEAKER.—It is not like that.

ಶ್ರೀ ಎ. ಜಿ. ಕೊಡಗಿ.—ನಾನು ಒಂದು ಪ್ರಾಮುಖ್ಯವಾದ ವಿಷಯದ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ, ಅದು ಏನಾಯಿತೋ ಗೊತ್ತಿಲ್ಲ.

ಅಧ್ಯಕ್ಷರು.—ನಾನು ಆಫೀಸಿನವರ ಹತ್ತಿರ ಈ ಬಗ್ಗೆ ವಿಚಾರಿಸಿದೆ, ತಾವು ಕಳುಹಿಸಿದ್ದ ಸೂಚನೆಯನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿದ್ದಾರೆ. ಅಲ್ಲಿಂದ ಉತ್ತರ ಬಂದ ಮೇಲೆ ಅದನ್ನು ಅಜೆಂಡಾದಲ್ಲಿ ಹಾಕಿಸುತ್ತೇನೆ. ನೀವು ಇವತ್ತೇ ಹಾಕಬೇಕು ಎಂದು ಹೇಳಿದರೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ. ಜಿ. ಕೊಡಗಿ.—ನಾನು ಹೇಳುವುದಕ್ಕೆ ಅವಕಾಶವಾದರೂ ಕೊಡಬೇಕಲ್ಲ.

ಅಧ್ಯಕ್ಷರು,—ನೀವು ನೋಟೀಸ್ ಕೊಟ್ಟ ವಿಚಾರವನ್ನು ಕೇಳಿದ್ದೇನೆ. ಅದೇರೀತಿ ೩೬ ನೋಟೀಸ್ ಗಳು ಬಂದಿವೆ. ಎಲ್ಲವನ್ನೂ ಒಂದೇ ದಿವಸ ಅಜೆಂಡಾದಲ್ಲಿ ಹಾಕುವುದಕ್ಕೆ ಆಗುವುದಿಲ್ಲ. ಇಲಾಖೆಯಿಂದ ಇನ್‌ಫರ್ಮೇಷನ್ ಬಂದಮೇಲೆ ಆದ್ಯತೆ ಮೇರೆಗೆ ಅಜೆಂಡಾದಲ್ಲಿ ಅದನ್ನು ಹಾಕುತ್ತೇವೆ, ಆದ್ದರಿಂದ ನೀವು ಆ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದು ಬೇಡ.

ಶ್ರೀ ಎ. ಜಿ. ಕೊಡಗಿ.—ಇದುವರೆಗೆ ೭-೮ ಗಮನ ಸೆಳೆಯುವ ಸೂಚನೆಗಳನ್ನು ಕೊಟ್ಟಿದ್ದೇನೆ. ಆದರೆ ಒಂದೂ ಬಂದಿಲ್ಲ. ಇನ್ನೊಂದು ಪ್ರಾಮುಖ್ಯವಾದ ವಿಚಾರ ಏನೆಂದರೆ ಶಾಸಕರ ಭವನದಲ್ಲಿ ಬಹಳ ಅನಾನುಕೂಲತೆಗಳಿವೆ.

ಅಧ್ಯಕ್ಷರು.—ಅದನ್ನೆಲ್ಲಾ ಇಲ್ಲಿ ಪ್ರಸಾಪ ಮಾಡುವುದು ಬೇಡ.

ಶ್ರೀ ಎ. ಜಿ. ಕೊಡಗಿ.—ನಾವು ಪ್ರಾಮುಖ್ಯವಾದ ವಿಚಾರವನ್ನು ನಿಮ್ಮ ಹತ್ತಿರ ಇಲ್ಲಿ ಹೇಳದೇ ಇನ್ನೆಲ್ಲಿ ಹೇಳಬೇಕು.

ಅಧ್ಯಕ್ಷರು.—ನೀವು ಆ ರೀತಿ ಇನ್‌ಸಿಸ್ಟ್ ಮಾಡಬೇಡಿ.

ಶ್ರೀ ಎ. ಜಿ. ಕೊಡಗಿ.—ನೀವು ಅವಕಾಶ ಕೊಡದೇ ಇದ್ದರೆ ಮತ್ತೆ ಎಲ್ಲಿ ಅವಕಾಶವಿದೆ ನಮಗೆ ?

ಅಧ್ಯಕ್ಷರು.—ನೀವು ಬಂದು ನನಗೆ ಹೇಳಬಹುದಲ್ಲ. ನನ್ನನ್ನು ಭೇಟಿ ಮಾಡಿ ಹೇಳಿದರೆ ನಾನು ಖಂಡಿತ ನೋಡುತ್ತೇನೆ.

ಶ್ರೀ ಎ. ಜಿ. ಕೊಡಗಿ.—ಈ ಸಂದರ್ಭದಲ್ಲಿ ನಮಗೆ ಹೇಳುವುದಕ್ಕೆ ಅವಕಾಶ ಇಲ್ಲದಿದ್ದರೆ ಬೇರೆ ಯಾವ ಸಂದರ್ಭದಲ್ಲಿ ನಿಮಗೆ ಹೇಳುವುದಕ್ಕೆ ಅವಕಾಶವಿದೆ ? ಇದಕ್ಕೆಲ್ಲಾ ನಾವು ನೋಟೀಸ್ ಕೊಟ್ಟು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ನೇರವಾಗಿ ತರಬೇಕಾಗುತ್ತದೆ. ಕೆಲವು ಪ್ರಾಮುಖ್ಯವಾದ ವಿಷಯಗಳನ್ನು ಶೂನ್ಯ ವೇಳೆಯಲ್ಲಿ ಎತ್ತುವುದಕ್ಕೆ ಅವಕಾಶ ಇದೆ. ಅದು ಹಿಂದಿನಿಂದಲೂ ನಡೆದುಕೊಂಡುಬಂದಿದೆ. ಅದೇರೀತಿ ನಾನು ಈಗ ಹೇಳುತ್ತಿದ್ದೇನೆ. ತಾವು ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ನನ್ನನ್ನು ಭೇಟಿ ಮಾಡಿ ಎಲ್ಲಾ ಹೇಳಿ. ನಾನು ಸರಿ ಮಾಡಿಸುತ್ತೇನೆ.

ಶ್ರೀ ಎ. ಜಿ. ಕೊಡಗಿ.—ಶಾಸಕರ ಭವನದಲ್ಲಿ ನೀರಿಲ್ಲದೆ ತುಂಬಾ ತೊಂದರೆ ಯಾಗಿದೆ.

SPEAKER.—Certainly I will look into that. In the morning one Hon. Member contacted me over the Phone and immediately I contacted the officer concerned and told him to attend to his grievances. Therefore, raising such matters suddenly on the floor of the House is not proper. ಇದನ್ನೆಲ್ಲಾ ಈ ಮನೆಯಲ್ಲಿ ಎತ್ತುವುದು ಸರಿಯಲ್ಲ,

ಶ್ರೀ ಎ. ಜಿ. ಕೊಡಗಿ.—ಬರೀ ನೀರಿನ ವಿಚಾರ ಮಾತ್ರವಲ್ಲ ; ಕ್ಯಾಂಟೀನ್ ವಿಚಾರವನ್ನೂ ಹೇಳಬೇಕಾಗಿದೆ. ಅಲ್ಲಿ ಸಪ್ಲೈ ಮಾಡುವವರು ಇಲ್ಲ.

ಅಧ್ಯಕ್ಷರು.—ವೈಯಕ್ತಿಕವಾದ ವಿಷಯಗಳಿದ್ದರೆ ನನಗೆ ಬಂದು ತಿಳಿಸಿ. ನಾನು ಸರಿ ಮಾಡಿಸುತ್ತೇನೆ.

SRI B. BASAVALINGAPPA.—Sir, I think particularly during the zero hour the grievances of members can be expressed. Certain Hon. Members may have grisvances about answers to questions, certain others about canteen, *etc.* Therefore, I think the indulgence of the Speaker is required at least to hear them and to give a patient hearing and solve the problem.

ಅಧ್ಯಕ್ಷರು.—ವಸತಿ ಸಮಸ್ಯೆಯ ಬಗ್ಗೆ ಏನಾದರೂ ತೊಂದರೆ ಇದ್ದರೆ ಅದಕ್ಕಾಗಿ ಹೌಸ್ ಕಮಿಟಿ ಇದೆ. ಅಲ್ಲಿ ಹೇಳಬಹುದು. ನನ್ನ ಹತ್ತಿರ ತಿಳಿಸಿದರೆ ನಾನು ಖಂಡಿತ ಅದನ್ನು ಸರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಅದನ್ನು ಬಿಟ್ಟು ಇಲ್ಲಿ ಪ್ರಸ್ತಾಪ ಮಾಡಿ ಸಭೆಯ ಅಮೂಲ್ಯ ವೇಳೆಯನ್ನು ಹಾಳು ಮಾಡುವುದು ಒಳ್ಳೆಯ ಸಂಪ್ರದಾಯವಲ್ಲ.

ಶ್ರೀ ಜೆ. ಹೆಚ್. ಪಟೇಲ್ —ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ ಆದರೆ ಈಗ ಇರತಕ್ಕ ಪರಿಸ್ಥಿತಿಯಲ್ಲಿ ಶಾಸಕರ ಭವನದಲ್ಲಿ ಮನುಷ್ಯರು ವಾಸಮಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ನೀರಿಲ್ಲ, ಟೆಲಿಫೋನ್ ಕೆಲಸ ಮಾಡುವುದಿಲ್ಲ, ಕ್ಯಾಂಟೀನ್ ವ್ಯವಸ್ಥೆ ಸರಿಯಿಲ್ಲ. ಅಂಥ ವಾತಾವರಣ ಅಲ್ಲಿ ಇದೆ ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಫೋನ್ ಮಾಡೋಣವೆಂದರೆ ಫೋನ್‌ನಲ್ಲಿ ಕನೆಕ್ಷನ್ ಸಿಗುವುದಿಲ್ಲ. ನಾವು ಫೋನ್ ಮಾಡಿದರೆ ಯಾರೋ ಮಾತನಾಡುತ್ತಿರುವ ಶಬ್ದ ಕೇಳಿಸುತ್ತಿರುತ್ತದೆ. ಶಾಸಕರ ಭವನದ ವ್ಯವಸ್ಥೆ ಹೀಗಿದೆ. ಈ ದೇಶದಲ್ಲಿ ಒಂದು ಹೊತ್ತಿನ ಕೂಳೂ ಇಲ್ಲದೇ ಇರುವ ಜನ ಇರುವಾಗ ನೀವು ಈಗಿರುವ ವ್ಯವಸ್ಥೆಯಲ್ಲೇ ಅನುಸರಿಸುಕೊಂಡು ಹೋಗಿ ಎಂದು ಹೇಳಿಬಿಡಿ. ನಮ್ಮ ಶಾಸಕರ ಭವನದಲ್ಲಿರತಕ್ಕ ಅವ್ಯವಸ್ಥೆಯನ್ನು ನೋಡಿದರೆ ಈ ರಾಜ್ಯದಲ್ಲಿ ಬೇರೆ ಕಡೆಗಳಲ್ಲಿ ಇನ್ನೆಷ್ಟು ಅವ್ಯವಸ್ಥೆಯಿದೆಯೋ ಎಂಬ ಶಂಕೆ ಬರುತ್ತದೆ. ಮಾನ್ಯ ಅಧ್ಯಕ್ಷರು ಶಾಸಕರ ಭವನದ ಕಡೆಗೆ ಒಂದು ಸಾರಿಯಾದರೂ ಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಬಂದಂಥ ನೆನಪು ನನಗಿಲ್ಲ.

ಅಧ್ಯಕ್ಷರು.—ನಿಮ್ಮೊಂದಿಗೇ ಬರಬೇಕು ಎಂದೇನೂ ಇಲ್ಲ. ಕಟ್ಟಡದ ಕೆಲಸ ನಡೆಯುವಾಗ ನಾನು ಹೋಗಿ ನೋಡಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್ —ಅಲ್ಲಿ ಶಾಸಕರ ಭವನದಲ್ಲಿ ಯಾರು ಯಾರಿಗೂ ಹೇಳುವಹಾಗಿಲ್ಲ. ಅಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರು ನಮ್ಮ ಮೇಲೆ ಪ್ರೀತಿಗೌರವಾಗಿಯಾದರೂ ಆಲ್ಲಿಗೆ ಆಗಾಗ ಭೇಟಿ ಕೊಡುತ್ತಿರಬೇಕು. ಆಗ ಅಲ್ಲಿನ ಕಷ್ಟಗಳೇನು ಎಂಬುದು ಗೊತ್ತಾಗುತ್ತದೆ. ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಮತ್ತೊಮ್ಮೆ ಇಂಥ ವಿಷಯ ಗಳು ಪುನ್ರಾವರ್ತನೆ ಮಾಡುವುದಕ್ಕೆ ಅವಕಾಶ ಕೊಡದೆ ಎಲ್ಲವನ್ನೂ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ನೋಡಿ ಅದನ್ನೆಲ್ಲಾ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಇನ್ನು ಮುಂದೆ ಈ ರೀತಿ ತೊಂದರೆಗಳಾಗಿ ಅದು ಈ ಸದನದಲ್ಲಿ ಪುನ್ರಾವರ್ತನೆ ಆಗುವಂಥ ಪರಿಸ್ಥಿತಿ ಬರದಂತೆ ಕ್ರಮ ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ.

MR. SPEAKER.—I am inviting you and Sri Kodgi for discussion today itself.

Use of Kannada in the Home

ಶ್ರೀ ಗಟ್ಟಿ ಚಂದ್ರಶೇಖರ್.—ಸ್ವಾಮಿ, ನಮ್ಮ ರಾಜ್ಯ ಕನ್ನಡ ರಾಜ್ಯ, ಕನ್ನಡ ಭಾಷೆ ಆಡಳಿತ ಭಾಷೆಯಾಗಿ ಜಾರಿಗೆ ಬಂದಿದೆ. ನಾನು ೧೮-೧೯ನೇ ತಾರೀಖು ಕೇರಳ ವಿಧಾನಸಭೆಗೆ ಹೋಗಿದ್ದೆ. ಅಲ್ಲಿ ೨ ಗಂಟೆಗಳ ಕಾಲ ಕುಳಿತಿದ್ದರೂ ನನಗೆ ಅಲ್ಲಿ ಏನು ಮಾತನಾಡುತ್ತಿದ್ದಾರೆ ಎಂಬುದು ಅರ್ಥವಾಗಲಿಲ್ಲ ಅಲ್ಲಿ ಅಧ್ಯಕ್ಷರಾದಿಯಾಗಿ ಎಲ್ಲರೂ ಮಲೆಯಾಳಂನಲ್ಲಿ ಮಾತನಾಡುತ್ತಾರೆ. ಆದರೆ ನಮ್ಮ ವಿಧಾನ ಸಭೆಯಲ್ಲಿ ಮಾನ್ಯ ಅಧ್ಯಕ್ಷರು, ಕೆಲವು ಮಾನ್ಯ ಮಂತ್ರಿಗಳು ಕೆಲವು ಸದಸ್ಯರು ಇಂಗ್ಲೀಷಿನಲ್ಲೇ ಮಾತ ನಾಡುತ್ತಾರೆ. ಇದಕ್ಕೆ ಕಾರಣವೇನೋ ಗೊತ್ತಾಗುತ್ತಿಲ್ಲ. ಆದ್ದರಿಂದ ಇನ್ನು ಮುಂದೆ ಎಲ್ಲರೂ ಕನ್ನಡದಲ್ಲಿ ಮಾತನಾಡುವಂತೆ ಮಾಡಿ.

SPEAKER.—I welcome your suggestion.

Fire accident in Bamboo Bazar

SRI A. LAKSHMISAGAR.—Sir, I wish to bring to the notice of the Government through you, Sir, that there is yet another matter. A few days back there was a fire accident in the bamboo bazar.

MR. SPEAKER.—I suggest that you give a notice. Unless it is brought to the notice of the Government, how can they answer stright away ? That will be taken up tomorrow.

K. S. R. T. C. Bus accident near Nelamangala

ಶ್ರೀ ಬಿ. ವಿ. ಕಕ್ಕಿಲಾಯ.—ನಿನ್ನೆ ದಿವಸ ನೆಲಮಂಗಲದ ಹತ್ತಿರ ಒಂದು ಬಸ್ ಅಪಘಾತವಾಗಿ ೧೦ ಜನ ಸತ್ತುಹೋಗಿದ್ದಾರೆ. ಒಂದು ಮಗು ಕೂಡ ಸತ್ತುಹೋಗಿದೆ. ೩೬ ಜನಕ್ಕೆ ಗಾಯವಾಗಿದೆ. ಇದರ ಬಗ್ಗೆ ಮುಂಜಾನೆ ಪತ್ರಿಕೆಯಲ್ಲಿ ನೋಡಿದ್ದೇವೆ. ಬಸ್ಸಿನ ಮುಂದಿನ ಚಕ್ರ ಹೊಡೆದುಹೋಗಿ ಅಪಘಾತ ಸಂಭವಿಸಿದೆ ಎಂದು ನಮ್ಮ ಗಮನಕ್ಕೆ ಬಂದಿದೆ. ನೊಂದವರಿಗೆ ಏನು ಪರಿಹಾರ ಕೊಟ್ಟಿದ್ದಾರೆ ಎಂಬುದು ತಿಳಿದುಬಂದಿಲ್ಲ. ಇದು ಬಹಳ ಪ್ರಾಮುಖ್ಯವಾದ ವಿಷಯವಾಗಿರುವುದರಿಂದ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಈ ವಿಷಯದಲ್ಲಿ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಟ್ಟರೆ ಒಳ್ಳೆಯದು.